ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—೧೯೮೭ರ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ರ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಇಸವಿಯ ನೋಂದಣಿ(ಕರ್ನಾಟಕ)ತಿದ್ದುಪಡಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

(೬೪) ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಯೋಜನೆ, ಮತ್ತು ಕಾರ್ಮಿಕ ಮಂತ್ರಿಯವರ ಪರವಾಗಿ ನಾನು ೧೯೮೭ನೇ ಇಸವಿಯ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಇರತಕ್ಕಂಥ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ನಮಗೆ ಸ್ವಲ್ಪ ತೊಂದರೆ ಬಂದಿದೆ. ಈಗ ಇರತಕ್ಕ ಸಬ್ ಸೆಕ್ಷನ್ ೨ ಆಫ್ ಸೆಕ್ಷನ್ ೫೦ ನಲ್ಲಿ ಏನು ಇದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ:

> '' The Rigistratran of a district in which the presidency Town is included and the Registrar of the Delhi District may receive and Rigister any document referred to in Section 28 without regard to the situation in any part of India of the property to which the document relates ''

ಈಗಿನ ತಿದ್ದುಪಡಿ ಪ್ರಕಾರ ಏನು ಇದೆ ಎಂದರೆ ಒಂದು ಸ್ಥಿರ ಆಸ್ತಿಯನ್ನು ಪರಭಾರೆ ಮಾಡತಕ್ಕಂಥ ಸಂದರ್ಭದಲ್ಲಿ ಆ ಸ್ಥಿರ ಆಸ್ತಿ ಯಾವ ಸಬ್ ರಿಜಿಸ್ಟ್ರಾರ್ ಅಧಿಕಾರೀ ವ್ಯಾಪ್ತಿಯಲ್ಲಿ ಬರುತ್ತದೊ ಅಲ್ಲಿ ತಮ್ಮ ಕಾಗದ ಪತ್ರಗಳನ್ನು ತಂದು ರಿಜಿಸ್ಟ್ರೇಷನ್ ಮಾಡಿಸಬೇಕು ಅನ್ನುವುದು ಇದೆ. ಈ ಹಿಂದಿನ ಆಕ್ಟ್‌ನ ಸಬ್ ಸೆಕ್ಷನ್ ೨ ಆಫ್ ಸೆಕ್ಷನ್ ೫೦ ಪ್ರಕಾರ ಪ್ರೆಸಿಡೆನಿಸ್ ಟಾನ್ಸ್ ಮತ್ತು ಡೆಲ್ಲಿ ಡಿಸ್ಟ್ರಿಕ್ಟ್‌ನ ಈ ೪ ಕಡೆಗಳಲ್ಲಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದೇಶದಲ್ಲಿ ಯಾವ ಭಾಗದಲ್ಲಿ ಸ್ಥಿರ ಆಸ್ತಿ ಇದ್ದರೂ ಸಹ ಯಾವ ಭಾಗದಲ್ಲಾದರೂ ಹೋಗಿ ರಿಜಿಸ್ಟ್ರೇಷನ್ ಮಾಡಿಸಬಹುದು. ಬೆಂಗಳೂರು ಮತ್ತು ಬೇರೆ ಬೇರೆ ಕಡೆಯಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ತಮ್ಮ ಆಸ್ತಿಯನ್ನು ಪರಭಾರೆ ಮಾಡತಕ್ಕಂಥಾ ವಿಚಾರದಲ್ಲಿ ಜನರು ಅಲ್ಲಿಗೆ ರಿಜಿಸ್ಟ್ರೇಷನ್ ಮಾಡಿಸುವುದಕ್ಕೆ ಏನು ಹೋಗುತ್ತಾರೋ ಅದನ್ನು ತಪ್ಪಿಸುವುದಕ್ಕೆ ಇದನ್ನು ತಂದಿದ್ದೇವೆ. ತಮ್ಮ ಗಮನಕ್ಕೆ ತರಬೇಕಾದರೆ ಕೆಲವರು ಮುಂಬೈಗೆ ಹೋಗಿ ರಿಜಿಸ್ಟ್ರೇಷನ್ ಮಾಡಿಸುತ್ತಾರೆ, ಕೆಲವರು ಮದ್ರಾಸ್‌ಗೆ ಹೋಗಿ ಮಾಡಿಸುತ್ತಾರೆ. ಈ ಆಕ್ಟ್ ಪ್ರಕಾರ ಅಲ್ಲೆಲ್ಲಾ ಹೋಗಿ ರಿಜಿಸ್ಟ್ರೇಷನ್ ಮಾಡಿಸುವುದು ತಪ್ಪುತ್ತದೆ. ಇದನ್ನು ನಿಯಂತ್ರಣ ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದಲೂ ಮತ್ತು ಇದರಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಹಣ ಬೇರೆ ಕಡೆ ಹೋಗಲು ತಪ್ಪಿಸುವ ದೃಷ್ಟಿಯಿಂದಲೂ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಆದರೆ ಈ ತಿದ್ದುಪಡಿ ಜಾರಿಗೆ ಬರಬೇಕಾದರೆ ಕೇಂದ್ರ ಸರ್ಕಾರದವರ ಅಪ್ಪಣೆ ಬೇಕು. ಅವರಿಂದ ಅಪ್ಪಣೆ ಬಂದಮೇಲೆ ಈಗ ಮಾಡತಕ್ಕಂಥ ರೀತಿ ತಪ್ಪಿ ಹೋಗುತ್ತದೆ. ಈ ರೀತಿಯಾಗಿ ಆಂಧ್ರದಲ್ಲಿ ೧೯೮೬ ನೇ ಇಸವಿಯಲ್ಲೇ ಮಾಡಿದ್ದಾರೆ, ಏತಕ್ಕೊ ಏನೋ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಮೊದಲು ನೋಡಲಿಲ್ಲ. ಇದು ಸರ್ವ ಸಾಮಾನ್ಯವಾಗಿ ಎಲ್ಲರೂ ಒಪ್ಪತಕ್ಕಂಥ ವಿಚಾರ ಮತ್ತು ಇದು ಎಲ್ಲರಿಗೂ ಅನುಕೂಲಕರವಾಗಿರತಕ್ಕಂಥ ವಿಚಾರವಾದುದರಿಂದ ಈ ತಿದ್ದುಪಡಿಯನ್ನು ಮಾನ್ಯ ಸಭೆ ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್(ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕ ಏನು ಇದೆ ಇದು ನಮ್ಮ ರಾಜ್ಯದ ಬೊಕ್ಕಸದ ಹಿತವನ್ನು ಕಾಪಾಡಬೇಕೆನ್ನುವ ಹಿತದೃಷ್ಟಿಯಿಂದ ಕೂಡಿದ್ದಾಗಿರುವುದರಿಂದ ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪಬ್ಲಿಕ್ ಸೇಫ್ಟಿ ಹೆಲ್ತ್, ಪ್ಲಾನಿಂಗ್ ಇಂಪ್ರೂಮೆಂಟ್ ಈ ದೃಷ್ಟಿಯಿಂದ ನಾವು ಕೆಲವು ರಿಸ್ಟ್ರಿಕ್ಷನ್ ಹಾಕಿದ್ದೇವೆ. ಅದನ್ನು ಚಾಲೇಂಜ್ ಮಾಡಿದ್ದಾರೆ. ಇದು ಬಹಳ ಪ್ರಮುಖವಾದ ವಿಷಯ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹಿಂದೆ ಬೇರೆ ಬೇರೆ ಕಾಯಿದೆಗಳ ಪ್ರಕಾರ ಬೇರೆ ಬೇರೆ ನಿಯಮಾವಳಿಗಳು ಏನು ಇತ್ತು ಅದನ್ನು ಸರಿಯಾಗಿ ಜಾರಿಗೆ ತರದೇ ಅದನ್ನು ಸರಿಯಾಗಿ ಪರಿಗಣನೆಗೆ ತೆಗೆದುಕೊಳ್ಳದೆ ತಮ್ಮ ಅಸ್ತಿಯನ್ನು ಪರಭಾರೆ ಮಾಡತಕ್ಕಂಥಾದ್ದು ಇತ್ತು, ಬಹುಶಃ ಇವೆಲ್ಲಾ ನಡೆಯ ಬೇಕಾದರೆ ಈ ವಿವರಗಳನ್ನು ಕೇಳದೆ ಇದ್ದಂಥ ಕಾಲದಲ್ಲಿ ಆ ರೀತಿ ಇತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಅವಾಗ ಕೇಂದ್ರ ಸರ್ಕಾರದವರು ಇದನ್ನು ಗಮನಿಸಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಸಚಿವರು ಹೇಳಿದ ಹಾಗೆ ಹಿಂದೆ ಇದನ್ನು ಅಷ್ಟಾಗಿ ಗಮನಿಸಲಿಲ್ಲ. ಇದನ್ನು ಗಮನಿಸದೇ ಇದ್ದುದರಿಂದ ಈಗಾಗಲೇ ಬರತಕ್ಕಂಥ ಆದಾಯವನ್ನು ನಾವು ಸಾಕಷ್ಟು ಕಳೆದುಕೊಂಡಿದ್ದೇವೆ. ಮೊದಲೇ ಗಮನಿಸಿದ್ದರೆ ನಮ್ಮ ರಾಜ್ಯಕ್ಕೆ ಎಷ್ಟೋ ಆದಾಯ ಬರುತ್ತಿತ್ತು. ನಾನು ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಇದರಿಂದ ಎಷ್ಟು ಹಣ ವರ್ಷಕ್ಕೆ ಲಂಕ್ಷ್ಮಿನು ಆಗುತ್ತಿತ್ತು ಎನ್ನುವ ಒಂದು ಅಂದಾಜು ಇಟ್ಟುಕೊಂಡಿದ್ದರೆ ಇದನ್ನು ಸರ್ಕಾರ ಯಾವ ಉದ್ದೇಶದಿಂದ ತಂದಿದೆಯೋ ಅದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇದರಲ್ಲಿ ನಾವು ಪ್ರಶ್ನೆ ಮಾಡುವಂಥಾದ್ದು ಏನೂ ಇಲ್ಲ. ತಡವಾಗಿಯಾದರೂ ಈ ಒಂದು ತಿದ್ದುಪಡಿಯನ್ನು ಗಮನಿಸಿ ಸರ್ಕಾರದ ಬೊಕ್ಕಸದ ಹಿತದೃಷ್ಟಿಯಿಂದ ಇದನ್ನು ತಂದಿರುವುದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಏನಾದರೂ ಕೊಡುತ್ತಾರೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ವಿವರಿಸಿ ಹೇಳಿದ್ದೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ '' ೧೯೬೨ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು.—ಖಂಡ ೨ ಮತ್ತು ೩ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಪಿತ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಮಂಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ದಿನದ ಕಾರ್ಯಕಲಾಪ ಮುಗಿಯಲು ಇನ್ನೂ ಮುಕ್ಕಾಲು ಗಂಡೆ ಸಮಯವಿರುವುದರಿಂದ ಈ ದಿನದ ಕಾರ್ಯಕಲಾಪದ ಪಟ್ಟಿಯಲ್ಲಿರುವ ಎರಡನೇ ತಿದ್ದುಪಡಿ ವಿಧೇಯಕವನ್ನು ಈ ಪರ್ಯಾಲೋಚಿಸಬಹುದೆಂದು ಸೂಚಿಸುತ್ತೇನೆ. ಹಾಗೂ ಇದನ್ನು ಹೆಚ್ಚಿನ ಚರ್ಚೆ ಇಲ್ಲದೆ ಪಾಸ್ ಮಾಡಿಕೊಡಬೇಕೆಂದು ಮಾನ್ಯ ಶ್ರೀನಿವಾಸ ಅವರಲ್ಲಿ ಹಾಗೂ ಮಾನ್ಯ ಮಾದೇಗೌಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಾವು ಪ್ರಸ್ತಾವವನ್ನು ಮಂಡನೆ ಮಾಡಬಹುದು.

೧೯೮೭ರ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಆನೈತಿಕ ವ್ಯಪಹಾರದ ಅಪರಾದಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ೧೯೮೭ರ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಆನೈತಿಕ ವ್ಯಪಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮಾನ್ಯ ಗೃಹಮಂತ್ರಿಗಳ ಪರವಾಗಿ ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಹೋದವರ್ಷ ನಾವು ಈ ಬಗ್ಗೆ ಒಂದು ಹೊಸ ಕಾನೂನನ್ನು ಜಾರಿಗೆ ತಂದಿದ್ದೆವು. ಅದರ ಪ್ರಕಾರ ವಿಚಾರಣೆಯಿಲ್ಲದೆ ೧೨ ತಿಂಗಳ ಕಾಲ ಈ ಕಾನೂನಿನಲ್ಲಿ ಬರುವಂತಹವರನ್ನು ಜೈಲಿನಲ್ಲಿಡಬಹುದು. ಈ ಕಾನೂನಿನ ಪ್ರಕಾರ ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಕ್ರಮ ತೆಗೆದುಕೊಂಡು ಕೆಲವರನ್ನು ಜೈಲಿನಲ್ಲಿಟ್ಟಾಗ, ಅವರುಗಳು ಇದನ್ನು ಪ್ರಶ್ನೆ ಮಾಡಿ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿದರು. ನಂತರ ಹೈಕೋರ್ಟಿನವರು ಈ ಕಾನೂನಿನಲ್ಲಿರುವಂತಹ ಕೆಲವು ದೋಷಗಳನ್ನು ಎತ್ತಿ ತೋರಿಸಿ ಸ್ವಾತಂತ್ರ್ಯವಿಲ್ಲದವರನ್ನು ರಿಲೀಜ್ ಮಾಡಿದರು. ಈಗ ನಾವು ಹೈಕೋರ್ಟಿನವರು ತೋರಿಸಿರುವಂತಹ ದೋಷಗಳನ್ನು ಸರಿಪಡಿಸಿ, ಈ ದೋಷಗಳು ಮತ್ತೆ ಬರಬಾರದೆಂದು ಕಾರಣಕ್ಕೋಸ್ಕರ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಮ್ಮ ಈ ಸಭೆ ಮತ್ತು ಮೇಲ್ಮನೆಯವರು ಒಪ್ಪಿದ ಮೇಲೆ ಕೇಂದ್ರಸರ್ಕಾರದ ಒಪ್ಪಿಗೆ ಕೂಡ ಬೇಕಾಗುತ್ತದೆ. ೨ನೇ ಪೇಜಿನಲ್ಲಿ ಈ ರೀತಿ ಇದೆ:

''6A. Grounds of detention verable.–Where a person has been detained in pursuance of an order of detention under sub-section (1) or sub-section (2) of section 3, which has been made on two or more grounds, such order of detention shall be deemed to have been made separately on each of such grounds, and accordingly.—